# ಚರ್ಚೆ ಇಲ್ಲದೇ ವಿಧೇಯಕ ಅಂಗೀಕಾರಕ್ಕೆ ಸ್ಪೀಕರ್ ತಡೆ

## ಕಲಾಪದ ಸುಧಾರಣೆಗೆ ಕಾಗೇರಿ ಒತ್ತು

**ವಿಕ ಸುದ್ದಿಲೋಕ** ಬೆಂಗಳೂರು

ಯಾವುದೇ ವಿಧೇಯಕಕ್ಕೆ ಸದನದಲ್ಲಿ ಕನಿಷ್ಠ 10 ಸದಸ್ಯರು ಭಾಗವಹಿಸಿ ಚರ್ಚೆ ನಡೆಸದಿದ್ದರೆ ಅನುಮೋದನೆಗಾಗಿ ಮತಕ್ಕೆ ಹಾಕದಿರಲು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ದಿಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ.



ಶಾಸನಸಭೆ ಕಲಾಪದ ಗುಣಮಟ್ಟ ಸುಧಾರಣೆ ಹಾಗೂ ಮಹತ್ವ ಸಿಗುವಂತಾಗಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತಂತೆ ಮಾಜಿ ಸ್ಪೀಕರ್‌ಗಳು ಮತ್ತಿತರ ಪ್ರಮುಖರ ಅಭಿಪ್ರಾಯ, ಸಲಹೆ ಪಡೆಯುತ್ತಿದ್ದಾರೆ.

ವಿಧಾನಮಂಡಲ ಕಲಾಪ ಅರ್ಥಪೂರ್ಣವಾಗಿ ನಡೆಯುವಂತಾಗಲು ಶಾಸಕರು ಸದನಕ್ಕೆ ಬರಬೇಕು ಮತ್ತು ಕಲಾಪದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂಬ ಆಶಯದೊಂದಿಗೆ ನೂತನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಹತ್ವದ ಸುಧಾರಣಾ ಪ್ರಯತ್ನಗಳಿಗೆ ಚಾಲನೆ ನೀಡಲು ಬಯಸಿದ್ದಾರೆ.

ಪ್ರಸಕ್ತ ಸಾಲಿನ ಬಜೆಟ್ ಮೇಲೆ ಚರ್ಚೆಯೇ ನಡೆದಿಲ್ಲ. ಹಲವು ಮಹತ್ವದ ವಿಧೇಯಕಗಳು ಚರ್ಚೆಯೇ ಇಲ್ಲದೆ ಅನುಮೋದನೆಗೊಂಡಿವೆ. ಇತ್ತೀಚಿನ ದಿನಗಳಲ್ಲಿ ಈ ಬೆಳವಣಿಗೆ ಹೆಚ್ಚುತ್ತಿರುವುದು ಸಂಸದೀಯ ವ್ಯವಸ್ಥೆಯ ನಡವಳಿಕೆಗೆ ವಿರುದ್ಧವಾಗಿದೆ. ಇದಕ್ಕೆಲ್ಲಾ ಕಡಿವಾಣ ಹಾಕಲು ಹಣಕಾಸು ವಿಧೇಯಕ ಸೇರಿ ಎಲ್ಲ ಶಾಸನ ರಚನೆ ವೇಳೆ ಕನಿಷ್ಠ 10 ಸದಸ್ಯರು ಚರ್ಚೆಯಲ್ಲಿ ಭಾಗವಹಿಸದ ಹೊರತು, ಸದನದಲ್ಲಿ ವಿಧೇಯಕವನ್ನು ಮತಕ್ಕೆ ಹಾಕದಿರುವ ನಿರ್ಧರಿಸಿದ್ದಾರೆ.

ಸ್ಪೀಕರ್ ಕಾಗೇರಿ ಅವರು ಸೋಮವಾರ ಸದನದ ಕಲಾಪ ಗುಣಮಟ್ಟ ಸುಧಾರಣೆ ಕುರಿತಂತೆ ಪತ್ರಕರ್ತರೊಂದಿಗೆ ಅನೌಪಚಾರಿಕ ಸಮಾಲೋಚನಾ ಸಭೆ ನಡೆಸಿದರು. ಮಾಜಿ ಸ್ಪೀಕರ್‌ಗಳಾದ ಕಾಗೋಡು ತಿಮ್ಮಪ್ಪ, ಡಿ.ಬಿ.ಚಂದ್ರೇಗೌಡ, ಕೆ.ಆರ್.ಪೇಟೆ ಕೃಷ್ಣ ಸೇರಿ ಹಲವು ಪ್ರಮುಖರೊಂದಿಗೆ ಸಭಾಧ್ಯಕ್ಷರು ಈ ಬಗ್ಗೆ ಸಮಾಲೋಚಿಸಿ, ಸಲಹೆಗಳನ್ನು ಪಡೆದುಕೊಂಡಿದ್ದಾರೆ. ಡಿ.ದೇವರಾಜ ಅರಸು ಅವರ ಕಾಲದಲ್ಲಿ ಹಲವು ಕ್ರಾಂತಿಕಾರ ಶಾಸನಗಳು ರಚನೆಯಾದ ನಿದರ್ಶನ ಇರುವಾಗ ಈಗಿನ ಶಾಸಕರು ಮತ್ತು ಸಚಿವರೂ ಜನಕಲ್ಯಾಣ ಆಶಯದ ಚರ್ಚೆ, ತೀರ್ಮಾನಗಳಿಗೆ ವಿಧಾನಸಭೆಯನ್ನು ವೇದಿಕೆ ಮಾಡಿಕೊಳ್ಳಲು ಪ್ರೇರಣೆಯಾಗಬೇಕಿದೆ. ಅದಕ್ಕೆ ಮುನ್ನ ಎಲ್ಲ ಶಾಸಕರು ಸದನಕ್ಕೆ ಬರಬೇಕು ಮತ್ತು ಕಲಾಪದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಬೇಕು. ಈ ನಿಟ್ಟಿನಲ್ಲಿ ಪ್ರಯತ್ನ ನಡೆಸುವ ಇಂಗಿತವನ್ನು ಸ್ಪೀಕರ್ ವ್ಯಕ್ತಪಡಿಸಿದರು.

**ಉಗಾಂಡಕ್ಕೆ ಸ್ಪೀಕರ್**

ಈ ತಿಂಗಳ 22 ರಿಂದ 29 ರವರೆಗೆ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಉಗಾಂಡದಲ್ಲಿ ಆಯೋಜಿಸಿರುವ ಸಮ್ಮೇಳನದಲ್ಲಿ ಸ್ಪೀಕರ್ ಕಾಗೇರಿ ಅವರು ಪಾಲ್ಗೊಳ್ಳಲಿದ್ದಾರೆ.